ಹಾಲಿನ ಕೇಂದ್ರಗಳಿಂದ ರೈತರಿಗೆ ಬರಬೇಕಾದ ಬಾಕಿ ಹಣದ ಬಗ್ಗೆ

೧೧೦೦ (ಡಿ) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಪಾನ್ಯ ರೇಷ್ಮೆ, ಪಶು ಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಯೂನಿಯನ್, ಮೈಸೂರು ಯೂನಿಯನ್ ಮತ್ತು ಹಾಸನ ಯೂನಿಯನ್ ಗಳಿಗೆ ಹಾಲು ಉತ್ಪಾದಕರು ಸರಬರಾಜು ಮಾಡಿದ ರೈತರಿಗೆ ೧೯೮೬ನೇ ಫೆಬ್ರುವರಿ ೧೨ನೇ ದಿನಾಂಕದವರೆಗೆ ಕೊಡಬೇಕಾದ ಹಣವೆಷ್ಟು;

ಆ) ಹಾಲು ಶೇಖರಣಾ ಸಂಘಗಳಿಗೆ ರಜಾ ದಿನಗಳನ್ನು ಗೊತ್ತು ಮಾಡಿರುವುದರಿಂದ ರೈತರುಗಳಿಗೆ ತುಂಬಾ ತೊಂದರೆಯಾಗುವುದಿಲ್ಲವೆ;

ಇ) ಉತ್ಪಾದನೆಯಾದ ಹಾಲನ್ನು ವ್ಯವಸ್ಥಿತವಾಗಿ ಮಾರಾಟ ಮಾಡಲು ಅಧಿಕಾರಿಗಳಿಗೆ ಕೈಗೊಂಡಿರುವ ಕ್ರಮವೇನು;

ಈ) ಶೇಖರಿಸಿದ ಹಾಲನ್ನು ಪುಡಿ ಮಾಡುವ ಘಟಕ ಮತ್ತು ಹಾಲಿನ ಚಾಕಲೇಟು ತಯಾರು ಮಾಡುವ ಕಾರ್ಖಾನೆಗಳನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡುವ ಯೋಜನೆ ಸರ್ಕಾರದವರಲ್ಲಿ ಇದೆಯೇ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ, (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು),—

ಅ) ರೂ. ೩೨೬.೭೯ ಲಕ್ಷ.

ಆ) ಹೌದು.

ಇ) ದಿನವಹಿ ಸುಮಾರು ೫ ಲಕ್ಷ ೬೦ ಸಾವಿರ ಲೀಟರ್ ಹಾಲನ್ನು ಮಾರಾಟ ಮಾಡಲು ೧೫೦೦ ಏಜೆಂಟರುಗಳು, ೧೧೧ ಬಲ್ಕ್ ಪೆಂಡಿಂಗ್ ಬೂತ್‌ಗಳು, ೫೫ ಎಫ್.ಆರ್. ಪಿ. ಟ್ಯಾಂಕ್‌ಗಳು ಕೆಲಸ ಮಾಡುತ್ತಿವೆ. ಇದಲ್ಲದೆ ೩೪ ಮಿಲ್ಕ್ ಪಾರ್ಲರ್‌ಗಳು ರಾಜ್ಯದ ಮುಖ್ಯ ಕೇಂದ್ರಗಳಲ್ಲಿ ಸ್ಥಾಪಿಸಲ್ಪಟ್ಟಿವೆ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಸಗಟು ವ್ಯಾಪಾರಸ್ಥರನ್ನು ನೇಮಿಸಲಾಗಿದೆ. ಭಾರತೀಯ ರಕ್ಷಣಾ ಪಡೆಗೆ ಘನೀಕೃತ ಹಾಲು, ಹಾಲಿನ ಪುಡಿಗಳ ಸರಬರಾಜನ್ನು ಕೈಗೊಳ್ಳಲಾಗಿದೆ. ಭಾರತೀಯ ಹೈನು ನಿಗಮದ ಮುಖಾಂತರ ೨೦೦೦ ಮೆಟ್ರಿಕ್ ಟನ್ ಹಾಲಿನ ಪುಡಿಯನ್ನು ಹೊರ ರಾಜ್ಯದ ಮಹಾ ಮಂಡಲಿಗಳಿಗೆ ಸರಬರಾಜು ಮಾಡಲು ಒಪ್ಪಿಕೊಂಡಿರುತ್ತೇವೆ.

ಈ) ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯ ಅಧೀನದಲ್ಲಿ ಹಾಲು, ಹಾಲಿನ ಪುಡಿಯ ಘಟಕಗಳಿರುತ್ತವೆ. ಆಪರೇಷನ್ ಫ್ಲಡ್-೨ರಡಿಯಲ್ಲಿ ಮತ್ತೊಂದು ಹಾಲಿನ ಪುಡಿಯ ಘಟಕವನ್ನು ತುಮಕೂರಿನಲ್ಲಿ ಸ್ಥಾಪಿಸಲು ಯೋಚಿಸಲಾಗುತ್ತಿದೆ, ಸರ್ಕಾರದ ವತಿಯಿಂದ ಹಾಲಿನ ಚಾಕಲೇಟ್ ತಯಾರಿಸುವ ಕಾರ್ಖಾನೆ ಇರುವುದಿಲ್ಲ ಮತ್ತು ಅಂತಹ ಕಾರ್ಖಾನೆಯನ್ನು ಸ್ಥಾಪಿಸುವ ಉದ್ದೇಶವನ್ನು ಸಹ ಸರ್ಕಾರ ಹೊಂದಿಲ್ಲ.

ಕಳ್ಳಸಾಗಾಣಿಕೆಯನ್ನು ತಡೆಗಟ್ಟುವ ಬಗ್ಗೆ

೯೪೮ ಶ್ರೀ ವಸಂತ ಬಂಗೇರ (ಬೆಳ್ತಂಗಡಿ) ಪಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರ್ಕಾರಿ ಕಾಡಿನಿಂದ ವಿಪರೀತ ಮರ ಕಳ್ಳತನದ ವಿಚಾರ ಅನೇಕ ಬಾರಿ ಸರ್ಕಾರದವರ ಗಮನಕ್ಕೆ ತಂದರೂ ಯಾವುದೇ ರೀತಿಯ ಕ್ರಮ ಕೈಗೊಳ್ಳದಿರಲು ಕಾರಣವೇನು? ಇನ್ನೂ ಮುಂದಾದರೂ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ).—

ಬೆಳ್ತಂಗಡಿ ತಾಲ್ಲೂಕಿಗೆ ಸೇರಿದ ಸರ್ಕಾರಿ ಕಾಡಿನಿಂದ ಅಕ್ರಮವಾಗಿ ಮರಗಳನ್ನು ಕಳ್ಳಾಟಿಕೆಯಿಂದ ಸಾಗಿಸುವ ಪ್ರಕರಣಗಳನ್ನು ಪತ್ತೆಹಚ್ಚಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ, ಈಗಲೂ ರಕ್ಷಣಾ ಸಿಬ್ಬಂದಿಯವರು ಅರಣ್ಯ ಸ್ವತ್ತುಗಳ ರಕ್ಷಣೆಯ ಬಗ್ಗೆ ಜಾಗರೂಕತೆಯಿಂದ ಕೆಲಸ ನಿರ್ವಹಿಸುತ್ತಿದ್ದಾರೆ.